DEMOLITION OF A SHED

637. SRI K. M. NAGANNA (Chickpet).—

Will the Minister for Municipal Administration be pleased to state :—

(*a*) whether the Government has received any complaint from one Sri Venkateshaiah of Channapatna regarding illegal demolition of shed constructed by him in his land under license from the Channapatna Municipality ;

(*b*) if so, whether any action has been taken on the above complaint ;

(*c*) whether any Minister was involved in this ?

SRI B. BASAVALINGAPPA (Minister for Municipal Administration).—

(*a*) No.

(*b*) Does not arise in view of reply to item (*a*) above.

(*c*) Yes. The Minister for Labour has given instructions through phone message to the Administrator, Town Municipal Council, Channapatna. Accordingly action has been taken to demolish the shed put up on the land of Sri Venkateshaiah.

ಶ್ರೀ ಕೆ. ಎಂ. ನಾಗಣ್ಣ.—ನನ್ನ ಮೊದಲ ಪ್ರಶ್ನೆಗೆ ಉತ್ತರವಾಗಿ 'ಬಂದಿಲ್ಲ' ಎಂದು ಹೇಳಿದ್ದೀರಿ. ತಾರೀಖು ೧೩ನೇ ಜೂನ್ ೧೯೭೨ ರಂದು ಶ್ರೀ ವೆಂಕಟೇಶಯ್ಯ ಅವರು ಮುಖ್ಯ ಮಂತ್ರಿಗಳಿಗೆ, ಟೌನ್ಸ್ ಪೋರ್ಟ್ ಮಂತ್ರಿಗಳಿಗೆ ಮತ್ತು ಲೋಕಲ್ ಸೆಲ್ಫ್ ಮಂತ್ರಿಗಳಿಗೆ ದೂರು ಕೊಟ್ಟು ಅದರ ಒಂದು ಕಾಪಿಯನ್ನು ನನಗೆ ಕಳಿಸಿಕೊಟ್ಟಿದ್ದಾರೆ. ಆದ್ದರಿಂದ ತಾವು ಬಂದಿಲ್ಲ ಎಂದು ಹೇಳಿರುವುದು ಸರಿಯೇ ?

†ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಹತ್ತಿರ ಬಂದಿಲ್ಲ. ಅದಕ್ಕೆ ಆ ರೀತಿ ಹೇಳಿದೆ.

ಶ್ರೀ ಕೆ. ಎಂ. ನಾಗಣ್ಣ.—ವೆಂಕಟೇಶಯ್ಯನವರು ಆಫ್ರಿ ಷೆಡ್ ಹಾಕಿದ್ದರು. ಅವರು ಮುನಿಸಿಪಾಲಿಟಿಯಿಂದ ಲೈಸೆನ್ಸ್ ನಂಬರ್ ೮೭೨ ತಾರೀಖು ೨೩ನೇ ಫೆಬ್ರವರಿ ೧೯೫೯ ರಲ್ಲಿ ಲೈಸೆನ್ಸ್ ಪಡೆದುಕೊಂಡಿದ್ದರು. ಆ ಷೆಡ್ಡು ಶಿಥಿಲವಾದ ಪ್ರಯುಕ್ತ ಬೇರೆ ಷೆಡ್ಡನ್ನು ನಿರ್ಮಿಸಲು ಪುನಃ ಲೈಸೆನ್ಸ್ ನಂ. ೭೦೫ ತಾರೀಖು ೨೫ನೇ ಮೇ ೧೯೭೨ ರಲ್ಲಿ ಪುನಃ ಲೈಸೆನ್ಸ್ ತೆಗೆದುಕೊಡಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಬಿ. ಬಸವಲಿಂಗಪ್ಪ.—ಆದು ಬಂದಿದೆ.

ಶ್ರೀ ಕೆ. ಎಂ. ನಾಗಣ್ಣ.—ಆವರು ಷೆಡ್ಡನ್ನು ನಿರ್ಮಿಸಲು ಕಾನೂನು ಪ್ರಕಾರ ಲೈಸೆನ್ಸ್ ಆನ್ನು ಪಡೆದಿದ್ದರೂ ಕೂಡ ಮತ್ತೆ ಅದನ್ನು ೨ನೇ ಜೂನ್ ೧೯೭೨ರಲ್ಲಿ ವಾಪಸ್ಸು ತೆಗೆದುಕೊಂಡಿದ್ದೇವೆ ಎಂದು ಹೇಳುವುದಕ್ಕೆ ಕಾರಣವೇನು ?

ಶ್ರೀ ಬಿ. ಬಸವಲಿಂಗಪ್ಪ.—ವೆಂಕಟೇಶಯ್ಯನವರಿಗೆ ಷೆಡ್ಡನ್ನು ಕಟ್ಟುವುದಕ್ಕೆ ಮುನಿಸಿಪಾಲಿಟಿಯಿಂದ ಲೈಸೆನ್ಸ್ ಕೊಟ್ಟಿದ್ದರು. ಆದರೆ ಆವರು ಅವರ ಪಕ್ಕದಲ್ಲಿರತಕ್ಕ ಜಮೀನಿನಲ್ಲಿ ಅಕ್ರಮವಾಗಿ ಮನೆಯನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಆ ಲೈಸೆನ್ಸ್ ಆನ್ನು ಮುನಿಸಿಪಾಲಿಟಿಯವರು ವಿತ್‌ಡ್ರಾ ಮಾಡಿದ್ದಾರೆ.

ಶ್ರೀ ಕೆ. ಎಂ. ನಾಗಣ್ಣ.—ಚೀಫ್ ಆಫೀಸರು ೨ನೇ ಜೂನ್ ೧೯೭೨ ರಂದು ಲೈಸೆನ್ಸ್ ಆನ್ನು ವಿತ್‌ಡ್ರಾ ಮಾಡಿದ ಮೇಲೆ ೩ನೇ ಜೂನ್ ೧೯೭೨ ರಂದು ಆ ಷೆಡ್ಡನ್ನು ಡೆಮಾಲಿಷ್ ಮಾಡಿದ್ದಾರೆ. ಮುನಿಸಿಪಾಲಿಟಿಯಂ ಕಾನೂನು ಪ್ರಕಾರ ಆ ಷೆಡ್ಡನ್ನು ಡೆಮಾಲಿಷ್ ಮಾಡುವುದಕ್ಕೆ ಮುಂಚೆ ಮುನಿಸಿಪಲ್ ಆಕ್ಟ್ ನಂಬರ್ ೧೮೭ (ಎ) ಪ್ರಕಾರ ಅವರಿಗೆ ನೋಟೀಸ್ ಕೊಡಬೇಕು ಮತ್ತು ಸೆಕ್ಷನ್ ೧೮೯ (ಬಿ) ಪ್ರಕಾರ ೩ ದಿವಸ ಅವರಿಗೆ ಅವಧಿಯನ್ನು ಕೊಡಬೇಕು ಎಂದಿರುತ್ತದೆ. ಈ ವಿಧಿಯನ್ನು ಅವರು ಅನುಸರಿಸಿದಾ ರೆಯೇ ?

ಆ ಬಡ ಮನುಷ್ಯನಿಗೆ ೨ನೇ ಜೂನ್ ೧೯೭೨ ರಂದು ನೋಟೀಸ್ ಕೊಟ್ಟು ೩ನೇ ಜೂನ್ ೧೯೭೨ ರಂದು ಆ ಪೆಡ್ಡನ್ನು ಡೆಮಾಲಿಷ್ ಮಾಡಿದ್ದಾರೆ. ಇದಕ್ಕೆ ಕಾರಣ ಆ ಮನೆಯ ಪಕ್ಕದಲ್ಲಿ ಮುಸ್ಲಿಮರ ಗೋರಿ ಇರುವ ಪ್ರಯುಕ್ತ ಯಾವ ಮನೆಗಳು ಆ ಗೋರಿಯ ಪಕ್ಕದಲ್ಲಿ ಇರಬಾರದು ಎನ್ನುವ ದೃಷ್ಟಿಯಿಂದ ಆ ರೀತಿ ಮಾಡಿದ್ದಾರೆ ಈ ವಿಚಾರ ಶ್ರೀಮಾನ್ ಬಸವಲಿಂಗಪ್ಪನವರಿಗೆ ಗೊತ್ತಿದ್ದರೂ ಅವರು ಆ ದಿವಸ ಊರಿನಲ್ಲಿ ಇದ್ದರೂ ಕೂಡ ಸಾರಿಗೆ ಶಾಖೆಯ ಮಂತ್ರಿಗಳು ದೂರವಾಣಿಯ ಮೂಲಕ ಆ ಪೆಡ್ಡನ್ನು ಒಡೆಯುವುದಕ್ಕೆ ಚನ್ನಪಟ್ಟಣ ಪುರಸಭಾ ಆಡಳಿತಗಾರರಿಗೆ ಏತಕ್ಕೆ ಆದೇಶವನ್ನು ಕೊಟ್ಟಿದ್ದಾರೆ ? ಈ ವಿಚಾರದಲ್ಲಿ ಸಾರಿಗೆ ಮಂತ್ರಿಗಳು ಪ್ರವೇಶ ಮಾಡುವುದಕ್ಕೆ ಅವರಿಗೂ ಇದಕ್ಕೂ ಏನು ಸಂಬಂಧ ಇದೆ ?

ಶ್ರೀ ಬಿ. ಬಸವಲಿಂಗಪ್ಪ.—ಸಾರಿಗೆ ಇಲಾಖೆಯ ಮಂತ್ರಿಗಳು ಮಂತ್ರಿಮಂಡಲಕ್ಕೆ ಸಂಬಂಧಪಟ್ಟ, ಹಾಗೆ ಕ್ರಮತೆಗೆದುಕೊಳ್ಳುವುದು ಜಂಟಿ ಜವಾಬ್ದಾರಿಯ ವ್ಯಾಪ್ತಿಯಲ್ಲಿ ಬರುತ್ತದೆ. ನಾನು ಆ ದಿವಸ ಊರಿನಲ್ಲಿ ಇದ್ದನೋ ಅಥವಾ ಇಲ್ಲವೋ ಗೊತ್ತಿಲ್ಲ. ಅವರು ಅಕ್ರಮವಾಗಿ ಮನೆಯನ್ನು ಕಟ್ಟುತ್ತಿದ್ದಾರೆ ಎಂದು ಸಾರಿಗೆ ಮಂತ್ರಿಗಳಿಗೆ ದೂರು ಬಂದಾಗ ಅವರು ಫೋನ್ ಮುಖಾಂತರ ಕ್ರಮ ತೆಗೆದುಕೊಂಡಿದ್ದಾರೆ.

DROUGHT STRICKEN AREAS IN SHIMOGA TALUK

791. SRI S. M. SHEERANALY CHANDRASHEKAR (Hosanagar).—

Will the Minister for Revenue be pleased to state :—

the reasons for the delay in declaring about seventyfour villages of Shimoga taluk as drought striken areas ?

SRI N. HUTCHAMASTHY GOWDA (Minister for Revenue).—

As the Seasonal Conditions in Shimoga taluk covering 74 villages were good during the year 1971-72 there was no necessity to declare that area as drought stricken.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ.—ತಾವು ನನ್ನ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ೧೯೭೧-೭೨ನೇ ಸಾಲಿನಲ್ಲಿ ಶಿವಮೊಗ್ಗ ತಾಲ್ಲೂಕಿನ ೭೪ ಗ್ರಾಮಗಳನ್ನು ಒಳಗೊಂಡ ಪ್ರದೇಶದಲ್ಲಿ ಋತು ಮಾನ ಪರಿಸ್ಥಿತಿಯು ಚೆನ್ನಾಗಿದ್ದುದರಿಂದ ಸದರಿ ಪ್ರದೇಶವನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವ ಅವಶ್ಯಕತೆ ಕಂಡುಬರಲಿಲ್ಲ ಎಂದು ಹೇಳಿದ್ದೀರಿ, ಹೋದ ವರ್ಷ ಈ ಪ್ರದೇಶವನ್ನು ಬರಗಾಲ ಪ್ರದೇಶವೆಂದು ಸರ್ಕಾರದವರು ಒಪ್ಪಿಕೊಂಡಿದ್ದರೆ. ಈ ವರ್ಷ ಜೂನ್ ಮತ್ತು ಜುಲೈ ತಿಂಗಳಲ್ಲಿ ಇಲ್ಲಿ ಮಳೆ ಆಗಿಲ್ಲ, ಆದ್ದರಿಂದ ಅಲ್ಲಿ ಬರಗಾಲ ಪರಿಸ್ಥಿತಿ ಇದೆಂಬುದು ಗೊತ್ತಿದೆಯೆ?

†ಶ್ರೀ ಎನ್. ಹುಚ್ಚಮಾಸ್ತಿ ಗೌಡ.— ಮಾನ್ಯ ಸದಸ್ಯರು ಯಾವ ವರ್ಷಕ್ಕೆ ಎನ್ನುವ ವಿಷಯವನ್ನು ಪ್ರಶ್ನೆಯಲ್ಲಿ ಕೇಳಿದಿದ್ದರೂ ಕೂಡ ನಾವು ಅವರ ಪ್ರಶ್ನೆಗೆ ಉತ್ತರವನ್ನು ಒದಗಿಸಬೇಕು ಎಂದು ಮನಸ್ಸು ಮಾಡಿ ಉತ್ತರವನ್ನು ಒದಗಿಸಿದ್ದೇವೆ. ೧೯೭೦-೭೧ನೇ ಇಸವಿಯಲ್ಲಿ ಮಾತ್ರ ಆ ಪ್ರದೇಶದಲ್ಲಿ ೪೭ ಗ್ರಾಮಗಳಲ್ಲಿ ಬೆಳೆ ಆಗಿಲ್ಲ ಎಂದು ೧೪೫೯ ರೂಪಾಯಿಗಳ ಕಂದಾಯವನ್ನು ರಿಮಿಷನ್ ಮಾಡಿದೆ ಮತ್ತು ಅಲ್ಲಿ ೩೫೪೦ ಕೆಲಸಗಳನ್ನು ಮಾಡಿದ್ದೇವೆ ಈ ವರ್ಷ ಅಲ್ಲಿ ಕಂದಾಯವನ್ನು ರಿಮಿಷನ್ ಮಾಡುವುದಕ್ಕೆ ಆದಕ್ಕೆ ಸಂಬಂಧಪಟ್ಟಂತೆ ಯಾವ ಒಂದು ಮಿತಿ ಇದೆಯೋ ಆ ಮಿತಿಗಿಂತ ಮೇಲ್ಪಟ್ಟು ಅಲ್ಲಿ ಬೆಳೆ ಆಗಿರುವುದರಿಂದ ಕಂದಾಯವನ್ನು ರಿಮಿಷನ್ ಮಾಡತಕ್ಕ ಪರಿಸ್ಥಿತಿ ಒದಗಲಿಲ್ಲ.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ.—ಈ ವರ್ಷ ಕೂಡ ಹಿಂದಿನ ವರ್ಷದಂತೆ ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಮಳೆ ಬಾದೇ ಇಲ್ಲ. ಇದು ತಮ್ಮ ಗಮನಕ್ಕೆ ಬಂದಿದೆಯೇ ? ಈ ಅಧಿವೇಶನ ಮುಗಿದ ಮೇಲೆ ತಾವು ಆ ಪ್ರದೇಶಕ್ಕೆ ಬಂದು ನೋಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಿ ಪರಿಸ್ಥಿತಿ ಏನಿದೆ ಎಂಬುದನ್ನು ಆದಷ್ಟು ಜಾಗ್ರತ ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ಆ ಬಗ್ಗೆ ಮುಂದಿನ ಕ್ರಮತೆಗೆದುಕೊಳ್ಳುತ್ತೇವೆ.